# ಕುಗ್ರಾಮ ಬೆಳಗಿದ ಹರೀಶ್‌ಗೆ ಮ್ಯಾಗ್ಸೆಸೆ ಗರಿ



ಮೋಹನ ಹೆಗಡೆ
mohanhegde.sk@gmail.com

1995ರ ವೇಳೆಗೆ ಆ ಊರಿಗೆ ಯುವಕನೋರ್ವ ಕೈಯಲ್ಲೊಂದು ಸೋಲಾರ್ ಲ್ಯಾಂಪ್ ಹಿಡಿದು ಬಂದ. ಇದು ರಾತ್ರಿಯಾಗುತ್ತಲೇ ಬೆಳಕು ನೀಡುತ್ತದೆ. ಅಂತಹ ಖರ್ಚೇನೂ ಇಲ್ಲ. ಬ್ಯಾಂಕ್‌ನವರು ನೆರವು ನೀಡುತ್ತಾರೆ. ನೀವು ಚಿಮಣಿ ಎಣ್ಣೆಗೋ, ಬುಡ್ಡಿ ದೀಪಕ್ಕೋ, ಬಟ್ಟೆ ಪಂಜಿಗೋ ಖರ್ಚು ಮಾಡುವ ಹಣವನ್ನು ಬ್ಯಾಂಕ್‌ಗೆ ತುಂಬುತ್ತಿರಿ. ಎಂದು ಬೆಳಕು ಹಚ್ಚಿ ತೋರಿಸಿದ. ಗೋಯ್ದು ಗೌಡ ನೋಡೋಣ್ರಾ ಎಂದು ಇಟ್ಟುಕೊಂಡ. ಒಂದು ತಿಂಗಳಿಗೆ ಮೇದಿನಿಯ ಹತ್ತಾರು ಒಕ್ಕಲಿಗರು ಗುಡ್ಡ ಇಳಿದು ಆ ಯುವಕನನ್ನು ಹುಡುಕುತ್ತಾ ಬಂದರು: ಮತ್ತಷ್ಟು ಸೋಲಾರ್ ಲ್ಯಾಂಪ್‌ಗಾಗಿ!

'ಬೆಳಕಿನ ಸಾಹೇಬ್ರಿಗೆ ಅದೇನೋ ದೊಡ್ಡ ಪ್ರಶಸ್ತಿ ಬಂತ್ಯೆತಂತ್ರಲ್ರ....'

350 ಮೀಟರ್ ಎತ್ತರದ ಮೇದಿನಿ ಗುಡ್ಡದ ನಿವಾಸಿ ಗೋಯ್ದು ಗೌಡ ಬೆಳಕಿನ ಸಾಹೇಬ್ರಗೆ ಪ್ರಶಸ್ತಿ ಸಿಕ್ಕಿದ್ದು ಕೇಳಿ ಮುಖವರಳಿಸಿ ಖುಷಿಯಿಂದ ಸೂರ್ಯನತ್ತ ನೋಡುತ್ತ ಕೈಮುಗಿದ..

ವಿಜಾಪುರದಿಂದ 40 ಕಿ.ಮೀ ದೂರದ ಲಂಬಾಣಿ ತಾಂಡಾದ ವಾಲ್ಮೀಕಿ ನಾಯ್ಕನಿಗೂ ಅದೇ ಬೆಳಕಿನ ಸಾಹೇಬ್ರಿಗೆ ಪ್ರಶಸ್ತಿ ಸಿಕ್ಕಿದ್ದಕ್ಕೆ ಅಷ್ಟೇ ಖುಷಿ. 'ರಾತ್ರಿ ಒಂದು ಚರಿಗೆ ನೀರು ತರಲು ಹೋದ ಹೆಣ್ಣ ಮಕ್ಕಳು ಹಾವು ಕಡಿದು ಸತ್ತಿದ್ಲು... ಈ ಪುಣ್ಯಾತ್ಮ ಸಾಹೇಬ್ರು ಬೆಳಕು ಹಾಕಿದನಂತ್ರ ಯಾರೂ ಹಾವು ಹಪ್ಪಡಿ ಕಡಿದು ಸತ್ತಿಲ್ಲ ನೋಡ್ರೀ...'

ಈಬೆಳಕಿನಸಾಹೇಬರುಹರೀಶ್‌ಹಂದೆ.ಕುಗ್ರಾಮಗಳಲ್ಲಿಯ 'ಕತ್ತಲೆ' ನಿವಾರಿಸಿದ ಈ ಪುಣ್ಯಾತ್ಮನಿಗೆ ಏಷ್ಯಾದ ನೋಬಲ್ ಪುರಸ್ಕಾರ ಎಂದೇ ಪ್ರಖ್ಯಾತಿ ಪಡೆದಿರುವ ರೇಮನ್ ಮ್ಯಾಗ್ಸೆಸೆ ಪುರಸ್ಕಾರದ ಗರಿ ದೊರಕಿದ್ದರೆ, ಅಂಧಕಾರದಿಂದ ಮುಕ್ತಿ ಪಡೆದವರ ಕಣ್ಣಳು ಧನ್ಯತೆಯ ಬೆಳಕು ಮೂಡಿದೆ.

ಹರೀಶ ಹಂದೆ ಸೂರ್ಯನ ಬೆಳಕನ್ನು ಹಿಡಿದಿಟ್ಟು ರಾತ್ರಿಯ ಕತ್ತಲನ್ನು ಹೊಡೆದೋಡಿಸುವ ಸೌರಶಕ್ತಿ ತಂತ್ರಜ್ಞಾನವನ್ನು ಕಗ್ಗತ್ತಲೆಯ ಕುಗ್ರಾಮಗಳಿಗೆ ತಲುಪುವಂತೆ ಮಾಡಿದರು. ತನ್ಮೂಲಕ ಬೆಳಕಿಗೂ ಅವರ ಆರ್ಥಿಕ ಅಭ್ಯುದಯಕ್ಕೂ ನೇರ ಸಂಬಂಧವಿದೆ ಎನ್ನುವುದನ್ನು ತೋರಿಸಿ ಲಕ್ಷಾಂತರ ಕುಟುಂಬಗಳ ಬದುಕಿಗೆ ದಾರಿ ದೀಪವಾಗಿಸಿದ್ದನ್ನು ಮ್ಯಾಗ್ಸೆಸೆ ಪುರಸ್ಕಾರ ಸಮಿತಿ ಗುರುತಿಸಿದೆ.

ನಗರಗಳಲ್ಲಿ ಎಲ್ಲರ ಮನೆಯ ಮೇಲೂ ಸೋಲಾರ್ ಪ್ಲೇಟ್ಸ್, ಸೋಲಾರ್ ಹೀಟರ್ ಕಾಣುತ್ತಿರುವಾಗ 'ಇದರಲ್ಲೇನು ಮಹಾಸಾಧನೆ...? ತಂತ್ರಜ್ಞಾನ ಎಷ್ಟೆಲ್ಲಾ ಸುಧಾರಿಸಿರುವಾಗ ಸೋಲಾರ್ ಲೈಟ್ ವಿತರಕನಿಗೆ ಮ್ಯಾಗ್ಸೆಸೆ ಪುರಸ್ಕಾರ...' 24 ಗಂಟೆಯೂ ಝಗಝಗಿಸುವ ವಿದ್ಯುತ್ ಬೆಳಕಿನಲ್ಲಿರುವವರು ಮೇದಿನಿ, ಸಸಾಲಟ್ಟಿ, ನೀರಲಕಟ್ಟಿ, ದೇವಗಿರಿ ಮೊದಲಾದ ಸಂಪೂರ್ಣ ಸೌರಶಕ್ತಿಯಿಂದಲೇ ಬೆಳಗುವ ಕುಗ್ರಾಮಗಳನ್ನು ಕಾಣಬೇಕು.

### ಮೇದಿನಿ ಹೇಗಿದೆ ಗೊತ್ತೇ...

ಮೇದಿನಿ ಎನ್ನುವ ಗ್ರಾಮ ಸಮುದ್ರ ಪಾತಳಿಯಿಂದ 500 ಮೀಟರ್ ಎತ್ತರದ ಗುಡ್ಡದ ತುದಿಗೆ ಇದೆ. ಕುಮಟಾ-ಸಿದ್ದಾಪುರ ರಸ್ತೆಯಲ್ಲಿ ಬಡಾಳದಲ್ಲಿ ಇಳಿದು ದಂಡಕಾರಣ್ಯದಲ್ಲಿ ಕಲ್ಲು ಬಂಡೆ, ಜಾಡು ಮುಳ್ಳು ಕಂಟಿಗಳ ಮಧ್ಯೆ ನುಸುಳುತ್ತ ಕಾಲು ದಾರಿಯಲ್ಲಿ ಈ ಗುಡ್ಡ ಏರಬೇಕು. ಅಲ್ಲಿ ಸುಮಾರು 40-50 ಮಂದಿ ಕುಂಬ್ರಿ ಮರಾಠಿ ಹಾಗೂ ಕರೇ ಒಕ್ಕಲು ಕುಟುಂಬಗಳಿವೆ. ಅಲ್ಲಿ ವಾಹನ ಹೋಗದು. ಅಲ್ಲಿರುವ ಮಂದಿಗೆ ಶಾಲೆ ಇಲ್ಲ. ಆಳದ ಬಾವಿಯಿಂದ ನೀರು ಸೇದಬೇಕು. ಹೆಂಚಿನ ಮನೆಯನ್ನೂ ಕಾಣಲಾರಿರಿ. ಇನ್ನು ಸಂಪರ್ಕ ಸೌಲಭ್ಯಗಳೇನೂ ಇಲ್ಲ. ವಿದ್ಯುತ್ ಕಂಬ, ಲೈನ್ ಒಯ್ಯುವುದು ಸಾಧ್ಯವೇ ಇಲ್ಲ. ಹಾಗಾಗಿ ಸೂರ್ಯಾಸ್ತವಾಗುತ್ತಿದ್ದಂತೆಯೇ ಇಡೀ ಊರನ್ನು ಕಾರ್ಗತ್ತಲೆ ಆವರಿಸುತ್ತದೆ! ವರ್ಷಕ್ಕೆ ಎರಡೇ ಸಾರೆ ಕುಟುಂಬದ ಸದಸ್ಯರು ಊರಿನಿಂದ ಇಳಿದು ಕುಮಟಾ ಪೇಟೆಗೆ ಬರುವುದು. ಒಮ್ಮೆ ಮಳೆಗಾಲದ ಪೂರ್ವ ಆರು ತಿಂಗಳಿಗಾಗುವಷ್ಟು ಆಹಾರ, ಬಟ್ಟೆ ಬರೆ ಕೊಂಡೊಯ್ಯಲು. ಮತ್ತೊಮ್ಮೆ ಭತ್ತ ಕೊಯ್ದು ಒಣಗಿಸಿ ಅದನ್ನು ಅಕ್ಕಿ ಮಾಡಿಸಿ ಮಾರಿ ಹೋಗಲು!

ಹಾಗಂತ ಮೇದಿನಿ ಹೆಸರು ಕೇಳಿದರೆ ಕರಾವಳಿ ಮತ್ತು ಮಲೆನಾಡಿನ ಜನರು ಪುಳುಕಿತರಾಗುತ್ತಾರೆ. ಮೂಗಿನ ಹೊಳ್ಳೆಯನ್ನು ಅರಳಿಸುತ್ತಾರೆ! ಏಕೆ ಗೊತ್ತೆ ಅಲ್ಲಿ ಈ ಹಿಂದುಳಿದ ಈ ಒಕ್ಕಲು ಬೆಳೆಯುವ 'ಪರಿಮಳ ಸಣ್ಣಕ್ಕಿ' ಪ್ರಸಿದ್ಧ! ಹಾಗೇ, ಹೊಸದಾಗಿ ಹೋದವರು ಹೆದರುತ್ತಾರೆ. ಏಕೆಂದರೆ ಇಲ್ಲಿ ಅಪಾರವಾಗಿರುವ ನಾಗರ ಹಾವು(ಸರ್ಪ)

ಪ್ರಯಾಸ ಪಟ್ಟು ಮೇದಿನಿಗೆ ಹೋದರೆ ಇಡೀ ಊರು ಕೇಸರಿ ವಾಸನೆಯ ಘಮ ಘಮ. ಈ ಮೇದಿನಿ ಅಕ್ಕಿಗೆ ಮಾರುಕಟ್ಟೆಯಲ್ಲಿ ಎಲ್ಲಿಲ್ಲದ ಬೇಡಿಕೆ. ಹೆಚ್ಚು ದರ ಕೂಡಾ. ವರ್ಷದ ಮೊದಲೇ ದರ ನಿರ್ಧರಿಸಿಕೊಳ್ಳುತ್ತಾರೆ. ಹಾಗೇ, ಮೇದಿನಿ ಐತಿಹಾಸಿಕವಾಗಿ ಪ್ರಸಿದ್ಧಿ. 500 ಮೀಟರ್ ಎತ್ತರದ ಮೇಲೆ ಐತಿಹಾಸಿಕ ಕೋಟೆ ಇದೆ. ಚಂದಾವರ ಕದಂಬರ (ಕೇಕೇಯರು) ಶಿಶುನಾಗನ ಮಗ ಕಾಮದೇವ ಕಟ್ಟಿಸಿದ ಕೋಟೆ ಇದು.

1995ರ ವೇಳೆಗೆ ಆ ಊರಿಗೆ ಯುವಕನೋರ್ವ ಕೈಯಲ್ಲೊಂದು ಸೋಲಾರ್ ಲ್ಯಾಂಪ್ ಹಿಡಿದು ಬಂದ. ಇದು ರಾತ್ರಿಯಾಗುತ್ತಲೇ ಬೆಳಕು ನೀಡುತ್ತದೆ. ಅಂತಹ ಖರ್ಚೇನೂ ಇಲ್ಲ. ಬ್ಯಾಂಕ್‌ನವರು ನೆರವು ನೀಡುತ್ತಾರೆ. ನೀವು ಚಿಮಣಿ ಎಣ್ಣೆಗೋ, ಬುಡ್ಡಿ ದೀಪಕ್ಕೋ, ಬಟ್ಟೆ ಪಂಜಿಗೋ ಖರ್ಚು ಮಾಡುವ ಹಣವನ್ನು ಬ್ಯಾಂಕ್‌ಗೆ ತುಂಬುತ್ತಿರಿ. ಎಂದು ಬೆಳಕು ಹಚ್ಚಿ ತೋರಿಸಿದ. ಗೋಯ್ದು ಗೌಡ ನೋಡೋಣ್ರಾ ಎಂದು ಇಟ್ಟುಕೊಂಡ. ಇದಾಗಿ ಒಂದು ತಿಂಗಳಿಗೆ ಮೇದಿನಿಯ ಹತ್ತಾರು ಒಕ್ಕಲಿಗರು ಗುಡ್ಡ ಇಳಿದು ಬಂದು ಆ ಯುವಕನನ್ನು ಹುಡುಕುತ್ತಾ ಬಂದರು. ಮತ್ತಷ್ಟು ಸೋಲಾರ್ ಲ್ಯಾಂಪ್‌ಗಾಗಿ!

'ಎಂದೂ ವಿದ್ಯುತ್ ಬೆಳಕು ಕಾಣುವುದೇ ಸಾಧ್ಯವಿಲ್ಲ. ಕತ್ತಲೆ ಅನಿವಾರ್ಯ ಎಂದು ತಿಳಿದಿದ್ದ ಮೇದಿನಿಗೆ ರಾತ್ರಿ ಸೂರ್ಯ ಬೆಳಗಿದ್ದ!' ಇದರ ಪರಿಣಾಮ ಆ ಜನರ ಬದುಕಿನಲ್ಲಿ ಏನಾಯಿತೆಂದರೆ ನಮ್ಮ ಮಕ್ಕಳೂ ಓದಬೇಕು ಎಂಬ ಆಕಾಂಕ್ಷೆ ಹುಟ್ಟಿತು. ಒಂದು ಶಾಲೆ ಸ್ಥಾಪಿಸಿದರು. ಮಕ್ಕಳು ಸೌರವಿದ್ಯುತ್ ಬಲ್ಬ್‌ನಲ್ಲಿ ಓದು ಬರಹ ಕಲಿತರು. ಭತ್ತದ ಗದ್ದೆಗೆ ಕಾಡು ಹಂದಿ, ಕಾಡು ಕೋಣಗಳ ಕಾಟ. ರಾತ್ರಿ ಹಾಲು ಚೆಲ್ಲಿದಂತೆ ಬೆಳಕು ಬಿದ್ದ ಕಾರಣ ಗದ್ದೆಗೆ ನುಸುಳಲಿಲ್ಲ. ಭತ್ತದ ಉತ್ಪನ್ನ ಹೆಚ್ಚಾಯಿತು. ಸೂರ್ಯ ಮುಳುಗುವ ಮೊದಲೇ ಊಟ ಮಾಡಿ ಮಲಗುತ್ತಿದ್ದವರು ಬೆಳಕು ಇರುವುದರಿಂದ ಬೆತ್ತದ ಬುಟ್ಟಿ, ಹಗ್ಗ, ಕೃಷಿ ಉಪಕರಣಗಳನ್ನು ರಾತ್ರಿ ಸಿದ್ಧಪಡಿಸಲಾರಂಭಿಸಿದರು. ಊರ ಹೆಣ್ಣು ಮಕ್ಕಳು ಬಟ್ಟೆ ಹೊಲಿಯುವುದನ್ನು ಕಲಿತರು. ಆದಾಯ ಹೆಚ್ಚಾಯಿತು!



### ಸಾಮಾಜಿಕ ಕ್ರಾಂತಿ

ಕೇವಲ ಮೇದಿನಿಯಲ್ಲ, ರಾಜ್ಯದ ತುತ್ತತುದಿಯ ಜೋಯಿಡಾ ತಾಲೂಕಿನ ಉಡಲನಾಗಲಾವಿ ಎನ್ನುವ ದಂಡಕಾರಣ್ಯದ ಮಧ್ಯೆ ಇರುವ ಹಳ್ಳಿಯಿಂದ ಚಿತ್ರದುರ್ಗದ ಕತ್ತಿಹೊಳೆಯವರೆಗಿನ ಹಳ್ಳಿಯವರೆಗೆ, ಮಹಾರಾಷ್ಟ್ರ, ಗುಜರಾತ್ ಕೇರಳದ ಗಡಿಭಾಗದವರೆಗೆ ಇಂತಹ 1.20 ಲಕ್ಷ ಕುಟೀರಗಳಲ್ಲಿ ಹರೀಶ ಹಂದೆ ಬೆಳಕಿದೆ. ಸೈಕಲ್, ಮೋಟಾರ್‌ಸೈಕಲ್‌ಗಳಲ್ಲಿ ಸೋಲಾರ್ ಲ್ಯಾಂಪ್, ಸೋಲಾರ್ ಪ್ಲೇಟ್ ಒಯ್ದು ಜೋಡಿಸಿದ್ದಾರೆ. ಇದಕ್ಕಾಗಿ ಸೆಲ್ಕೋ ಸೋಲಾರ್ ಸಂಸ್ಥೆ ಕಟ್ಟಿ ಬೆಳೆಸಿದ್ದಾರೆ. ಕೇವಲ ಕತ್ತಲು ನಿವಾರಿಸಿದ್ದಷ್ಟೇ ಅಲ್ಲ, ಆ ಕುಟುಂಬಗಳ ಬದುಕಿನಲ್ಲಿ ಬೆಳಕಾಗಿದ್ದಾರೆ! ರಾತ್ರಿ ಬೆಳಗುವ ಈ ಸೂರ್ಯ ಅವರಿಗೆಲ್ಲ ಅನ್ನ, ಆಹಾರ, ಶಿಕ್ಷಣ, ಶಕ್ತಿ, ಆದಾಯ ಎಲ್ಲವನ್ನೂ ನೀಡುತ್ತಾನೆ.



ಹರೀಶ ಹಂದೆ ಕುಂದಾಪುರ ತಾಲೂಕಿನ ಹಂದೆಟ್ಟು ಗ್ರಾಮದ ಕೋಟ -ಐರೋಡಿಯವರು. ತಂದೆ ಸುಬ್ರಹ್ಮಣ್ಯ ಹಂದೆ ಒಡಿಶಾದ ರೂರ್ಕೆಲದ ಉಕ್ಕಿನ ಕಾರ್ಖಾನೆಯಲ್ಲಿ ಉದ್ಯೋಗಿ. ಹಾಗಾಗಿಯೇ ಅಲ್ಲಿಯ 'ಇಸ್ಕತ್' ಶಾಲೆಗಳಲ್ಲಿ. ನಂತರ ಐಐಟಿ ಖರಗ್ಪುರದಲ್ಲಿ 'ಎನರ್ಜಿ ಇಂಜನಿಯರಿಂಗ್' ಪದವಿ. ಆನಂತರ ಅಮೆರಿಕಾದ ಮೆಸಾಚುಸೆಟ್ಸ್ ವಿ.ವಿಯಲ್ಲಿ ಸ್ನಾತಕೋತ್ತರ ಪದವಿ. ಅದರೊಟ್ಟಿಗೆ ಸೌರಶಕ್ತಿ ವಿದ್ಯುತ್ ತಂತ್ರಜ್ಞಾನ ಸುಧಾರಣೆಗಾಗಿ ಸಂಶೋಧನೆ. ಶ್ರೀಲಂಕ, ಇಂಡೋನೇಷಿಯಾ, ಆಫ್ರಿಕಾ ದೇಶಗಳ ಕುಗ್ರಾಮಗಳ ಜನರಲ್ಲಿ ಸೌರವಿದ್ಯುತ್ ತಂದ ಕ್ರಾಂತಿಕಾರ ಬದಲಾವಣೆಯನ್ನು ಕಂಡವರೇ ನಮ್ಮೂರ ಹಳ್ಳಿಗಳ ಕತ್ತಲು ಏಕೆ ನಿವಾರಿಸಬಾರದು ಎನ್ನುವ ಕಲ್ಪನೆ ಮೂಡಿತು. ಅಮೆರಿಕಾದಲ್ಲಿ ಮುಚ್ಚುವ ಸ್ಥಿತಿಯಲ್ಲಿದ್ದ ಸೆಲ್ಕೋ ಸೋಲಾರ್ ಲೈಟ್ ಪ್ರೈ ಲಿ. ಕಂಪೆನಿಯ ಸಹಪಾಲುಗಾರಿಕೆ ಪಡೆದು ಭಾರತದಲ್ಲಿ ವಿಸ್ತರಿಸಲು ಅದರ ಎಂ.ಡಿ.ಯಾದರು. ಕೈಯಲ್ಲಿ ಹಣ ಇಲ್ಲ. ಆದರೆ, ಊರಿಗೆ ಬೆಳಕು ನೀಡುವ ಉದಾತ್ತ ಧ್ಯೇಯವಿತ್ತು. ಸಾವಿರಾರು ಮಂದಿ ಸ್ನೇಹಿತರು, ಮಾರ್ಗದರ್ಶನ ನೀಡುವ ಹಿರಿಯರಿದ್ದರು. ಕುಂದಾಪುರ, ಶಿರಸಿ, ಕುಮಟಾ, ಧಾರವಾಡ, ಖಾನಾಪುರಗಳಲ್ಲಿ ಸುತ್ತಾಡಿದರು. ಆಗ ಅನ್ನಿಸಿದ್ದು ಸೌರವಿದ್ಯುತ್ ಲ್ಯಾಂಪ್ ಕೊಳ್ಳುವ ಶಕ್ತಿ ಇವರಿಗಿಲ್ಲ. ಆದರೆ, ಆ ಬೆಳಕು ಇವರ ಕೈಗೆ ಸಿಕ್ಕರೆ ಇವರ ದುಡಿಮೆ ದ್ವಿಗುಣವಾಗುತ್ತದೆ. ಬದುಕಿನ ಚಿತ್ರವೇ ಬದಲಾಗುತ್ತದೆ... ಪ್ರತಿ ಗುಡಿಸಿಲಿನಲ್ಲಿ ರಾತ್ರಿ ಸೂರ್ಯ ಬೆಳಗಬೇಕು ಅನ್ನಿಸಿತು.

### ಸೌರಜ್ಯೋತಿ ಯೋಜನೆ

ಕಾರು, ಮೋಟಾರ್‌ಸೈಕಲ್, ಪಂಪ್‌ಸೆಟ್ ಖರೀದಿಗೆ ಬ್ಯಾಂಕ್‌ಗಳು ಸಾಲ ನೀಡುತ್ತವೆ. ನಗರಗಳಲ್ಲಿ ಗೃಹೋಪಯೋಗಿ ವಸ್ತುಗಳಿಗೂ ಸಾಲ ದೊರೆಯುತ್ತವೆ. ಆದರೆ, ಕುಗ್ರಾಮಗಳ ನಿವಾಸಿಗಳು ಕತ್ತಲೆ ತೊಲಗಿಸಲು ಸಾಲ ಕೊಡುವವರಿಲ್ಲ ಏಕೆ...? ಎಂಬ ಚಿಂತೆ ಕಾಡಿತು. ಆಗ ನೆನಪಾದವರು ಕುಟುಂಬದ ಸ್ನೇಹಿತರಾದ, ಬ್ಯಾಂಕಿಂಗ್ ಪರಿಣಿತ ಕೆ.ಎಂ. ಉಡುಪ ಅವರು. ಧಾರವಾಡ ಮಲಪ್ರಭಾ ಗ್ರಾಮೀಣ ಬ್ಯಾಂಕ್ ಅಧ್ಯಕ್ಷರಾಗಿದ್ದ ಉಡುಪ ಅವರಿಂದ ಹರೀಶ್ ಆಶಯಕ್ಕೆ 'ವಿಟಾಮಿನ್ ಎಂ' ನೀಡುವ ಭರವಸೆ ದೊರೆಯಿತು. ಸೆಲ್ಕೋ ಜೊತೆ ಒಡಂಬಡಿಕೆ ಮಾಡಿಕೊಂಡರು. ಇದಕ್ಕಾಗಿಯೇ ರೂಪುಗೊಂಡಿತು 'ಸೌರ ಜ್ಯೋತಿ ಯೋಜನೆ'

ಇದು ದೊರೆತದ್ದೇ ತಡ ಹರೀಶ್ ವಿದ್ಯುತ್ ಪೂರೈಸಲು ಸಾಧ್ಯವೇ ಇಲ್ಲ ಎನ್ನುವ ಹಳ್ಳಿಗಳಿಗೆ ತಮ್ಮ ಸೆಲ್ಕೋ ತಂಡ ಸುತ್ತಿಸಿದರು. ಬ್ಯಾಂಕ್ ನೆರವು ನೀಡಿ ಅಲ್ಲೆಲ್ಲ ಸೌರಶಕ್ತಿ ಬೆಳಕು ನೀಡಿದರು. ಸೌರವಿದ್ಯುತ್ ತಂತ್ರಜ್ಞಾನದಲ್ಲಿ ಇನ್ನಷ್ಟು ಸುಧಾರಣೆ, ಸರಳತೆ ಹೆಚ್ಚಿಸಿದರು. ಕೇವಲ ಬೆಳಕಿಗಾಗಿ ಮಾತ್ರವಲ್ಲ, ಬಿಸಿ ನೀರು, ನೀರೆತ್ತಲು, ಅಡುಗೆ ಪದಾರ್ಥ ರುಬ್ಬಲು, ಬಿಸಿ ಮಾಡಲು, ಆಹಾರ ಸಂಸ್ಕರಣೆ ಇತ್ಯಾದಿಗಳಿಗೆ ಸೌರ ಶಕ್ತಿ ಬಳಸಲು ಸೂಕ್ತ ಯಂತ್ರ ಸಿದ್ಧಪಡಿಸಿ ಜನರಿಗೆ ಕಡಿಮೆ ಬೆಲೆಯಲ್ಲಿ ಸೆಲ್ಕೋ ದಲ್ಲಿ ದೊರೆಯುವಂತೆ ನೋಡಿಕೊಂಡರು.

'ಕತ್ತಲೆ ತೊರೆದು ಬೆಳಕು ಕಂಡ ಕುಟುಂಬಗಳಲ್ಲಾದ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆ ಕುರಿತು ಅಧ್ಯಯನ ನಡೆಸಿದ ಹರೀಶ್ ಹಂದೆ, ಅದೇ ವಿಷಯದ ಮೇಲೆ ನಂತರ ಮೆಸಾಚುಸೆಟ್ಸ್ ವಿ.ವಿಯಲ್ಲಿ ಪಿ.ಎಚ್.ಡಿ ಪಡೆದರು.

'ಬಡತನಕ್ಕೂ ಕತ್ತಲೆಗೂ ನೇರ ಸಂಬಂಧವಿದೆ. ಕತ್ತಲೆ ಹುಟ್ಟುವ ಪ್ರತಿ ಮಗುವಿನ ಬೆಳವಣಿಗೆ, ಬದುಕಿನ ಮೇಲೆ ಕರಿನೆರಳು ಬೀರುತ್ತದೆ. ಕತ್ತಲೆ ತೊಲಗಿಸಿ ಬಿಡಿ, ಏನೆಲ್ಲ ಬದಲಾವಣೆಯಾಗುತ್ತದೆ ಗೊತ್ತೇ...? ಪ್ರತಿ ಮಗುವೂ ಓದು ಬರಹ ಕಲಿಯುತ್ತದೆ. ಹೊರ ಜಗತ್ತಿನ ಪರಿಚಯವಾಗುತ್ತದೆ. ನಾನು ಸ್ವತಃ 1000 ಮನೆಗಳಿಗೆ ಜೋಡಿಸಿದ ರಾತ್ರಿ ಸೂರ್ಯನಿಂದ ಆ ಕುಟುಂಬಗಳಲ್ಲಿ ಹಲವರು ವಿದ್ಯಾವಂತರಾಗಿದ್ದಾರೆ. ಶೇ. 50ರಷ್ಟು ಮಂದಿ ಸ್ವಾವಲಂಬಿಗಳಾಗಿದ್ದಾರೆ. ಶೇ. 20ರಷ್ಟು ಮಂದಿ ಬದುಕು ಕಂಡುಕೊಂಡಿದ್ದಾರೆ. ಎಲ್ಲಕ್ಕೂ ಹೆಚ್ಚಾಗಿ ಆ ಎಲ್ಲ ಕುಟುಂಬಗಳ ಆರ್ಥಿಕ ಆದಾಯ ದ್ವಿಗುಣ, ತ್ರಿಗುಣವಾಗಿದೆ. ಇನ್ನೆಂತಹ ಸಂತೃಪ್ತಿ ಬೇಕು? ಇಂತಹ ಸಾಧನೆ ಮತ್ತಾವುದಿದೆ...?' ಎಂದು ಹರೀಶ ಹಂದೆ ಹರ್ಷ ವ್ಯಕ್ತಪಡಿಸುತ್ತಾರೆ.

### ಬೆಳಕಿನ ಪಡೆ

ಅವರು ಕೇವಲ 15ಸಾವಿರ ರೂ. ಬಂಡವಾಳ ತೊಡಗಿಸಿ ಕಟ್ಟಿದ ಸೆಲ್ಕೋ ಸಂಸ್ಥೆಯಲ್ಲಿ ಈಗ ರಾಜ್ಯಾದ್ಯಂತ 25ಕ್ಕೂ ಹೆಚ್ಚು ಶಾಖೆಗಳನ್ನು, 176 ನಿಷ್ಠಾವಂತ ಉದ್ಯೋಗಿಗಳನ್ನು, 200ಕ್ಕೂ ಹೆಚ್ಚು ವ್ಯವಹಾರ ಬಂಧುಗಳನ್ನು ಹೊಂದಿದ್ದರೆ, ಮೊದಲು ಕೆ.ಎಂ. ಉಡುಪ ಅವರು ಆರ್ಥಿಕ ನೆರವು ನೀಡಲು ಮುಂದೆ ಬಂದಿದ್ದರೆ, ಈಗ 20ಕ್ಕೂ ಹೆಚ್ಚು ಸಂಸ್ಥೆಗಳು ಸೌರ ವಿದ್ಯುತ್‌ಗೆ ನೆರವು ನೀಡಲು ಒಡಂಬಡಿಕೆ ಮಾಡಿಕೊಂಡಿವೆ.

1985 ರಿಂದ 1995ರವರೆಗೆ ಪರ್ಯಾಯ ಇಂಧನ ಮತ್ತು ಶಕ್ತಿ ಮೂಲದ್ದೇ ಮಾತು. ಆದರೆ, ಹರೀಶ್ ಮಾತಿಗಿಂತ ಕೃತಿಗಿಳಿದರು. ಶಕ್ತಿಯ ವಿವಿಧ ರೂಪ ಹಾಗೂ ಅಗತ್ಯತೆ ಯಾರಿಗಿದೆ ಎನ್ನುವುದನ್ನು ತೋರಿಸಿದರು. ಪರಿಣಾಮ ಗ್ರೀನ್ ಆಸ್ಕರ್ ಪ್ರಶಸ್ತಿ(2005) ಅಮೆರಿಕಾದ ಟೆಕ್ ಮ್ಯೂಸಿಯಂ ಅವರಾರ್ಡ್, ಸಾಮಾಜಿಕ ಉದ್ಯಮಿ ಪ್ರಶಸ್ತಿ, ಫೈನಾನ್ಷಿಯಲ್ ಟೈಮ್ಸ್‌ನ ಬೋಲ್ಡ್‌ನೆಸ್ ಇನ್ ಬ್ಯುಸಿನೆಸ್ ಪ್ರಶಸ್ತಿ ಲಭಿಸಿತ್ತು. 2008ರ ಇಂಡಿಯಾ ಟುಡೆ ಗುರುತಿಸಿದ ದೇಶದ ಭವಿಷ್ಯತ್ತಿನ 50 ನಾಯಕರಲ್ಲಿ ಈ ಸೂರ್ಯನ ರಾಯಭಾರಿಗೆ ಸ್ಥಾನ.

ಅಮೆರಿಕಾದ ಅಧ್ಯಕ್ಷ ಬರಾಕ್ ಒಬಾಮ್ ಇತ್ತೀಚೆಗೆ ಭಾರತಕ್ಕೆ ಬಂದಾಗ ಭೇಟಿಯಾದ 21 ಪ್ರಮುಖ ಪ್ರಗತಿಶೀಲ ಉದ್ಯಮಿಗಳಲ್ಲಿ ಹರೀಶ್ ಹಂದೆ ಒಬ್ಬರು

### ಬರೇ ಬೆಳಕಲ್ಲೋ ಅಣ್ಣಾ...

ಭಾರತದಲ್ಲಿಯ ವಿದ್ಯುತ್ ಕೊರತೆ, ಪ್ರಾಕೃತಿಕ ಲಕ್ಷಣ ಗಮನಿಸಿದರೆ ಇಂದಿಗೂ ಅರ್ಧದಷ್ಟು ಜನರು ಸಾಂಪ್ರದಾಯಿಕ ಇಂಧನ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಹಾಗಾಗಿ ಬೆಳಕಿಲ್ಲದೆ ಪ್ರಗತಿ ಸಾಧ್ಯವಿಲ್ಲ. ಅವರ ಬದುಕುವ ಹಕ್ಕು ಸಾಕಾರಗೊಳ್ಳಬೇಕಾದರೆ, ಬೆಳಕು ನೀಡುವುದು ಸರ್ಕಾರದ ಕರ್ತವ್ಯ ಮತ್ತು ಆದ್ಯತೆಯಾಗಬೇಕು. ಇದಕ್ಕಾಗಿ ಸ್ಥಳೀಯವಾಗಿ ಲಭ್ಯವಿರುವ ಸೌರವಿದ್ಯುತ್ ಒಂದೇ ಪರಿಹಾರ ಎಂದು ಪ್ರತಿಪಾದಿಸಿದ ಹರೀಶ್, ಇದಕ್ಕಾಗಿ ಸರ್ಕಾರದ ರಿಯಾಯಿತಿ ನೀತಿ ಹಾಗೂ ನಗರ ಪ್ರದೇಶಗಳಲ್ಲಿ ಸೋಲಾರ್ ಬಳಕೆ ಕಡ್ಡಾಯಗೊಳಿಸುವಂತೆ ಸಲಹೆ ನೀಡಿದ ಪರಿಣಾಮವೇ ಹೊಸ ಮನೆ, ಬಂಗ್ಲೆ ಕಟ್ಟುವವರು, ಸರ್ಕಾರಿ ಕಚೇರಿಗಳಲ್ಲಿ ಸೌರಶಕ್ತಿ ಬಳಕೆ ಕಡ್ಡಾಯವಾಗಿರುವುದು!

ಯಾಣದ ಪ್ರಸಿದ್ಧ ಸುಣ್ಣದ ಕಲ್ಲಿನ ಶಿಖರದ ಗವಿ ಹಾಗೂ ಭೈರವೇಶ್ವರದ ದೇವಾಲಯದ ಕತ್ತಲು ನಿವಾರಿಸಿದ್ದು ಹರೀಶ್ ಅವರ ಸೌರದೀಪ. ಕಾಳಿ ಜಲವಿದ್ಯುತ್ ಯೋಜನೆಯ ಪಕ್ಕದ ಹಳ್ಳಿ ಸೂರ್ಯ ಮುಳುಗುತ್ತಿದ್ದಂತೆಯೇ ಬೆಳಗುತ್ತಿರುವುದು ಸೆಲ್ಕೊ ದೀಪದಿಂದ! ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ 14 ಗ್ರಾಮಗಳನ್ನು ಸಂಪೂರ್ಣ ಸೌರಜ್ಯೋತಿ ಗ್ರಾಮವನ್ನಾಗಿಸಿದೆ. ಹಲವು ಹಳ್ಳಿಗಳಿಗೆ ಸೌರ ಬೀದಿ ದೀಪವನ್ನು ದೇಣಿಗೆ ನೀಡಿದೆ. ಇದೊಂದೇ ಬ್ಯಾಂಕ್ ಈವರೆಗೆ 26 ಸಾವಿರ ಸೌರಘಟಕಗಳಿಗೆ 41 ಕೋಟಿ ರೂ. ಆರ್ಥಿಕ ನೆರವು ನೀಡಿದೆ. ವಿಶೇಷವೆಂದರೆ ಯಾರೊಬ್ಬರೂ ಸಾಲದ ಕಂತಿನ ಬಾಕಿ ಇಟ್ಟುಕೊಂಡಿಲ್ಲವಂತೆ!

### ಪುರಸ್ಕಾರ ಸ್ವಂತಕ್ಕಲ್ಲ...

ಮ್ಯಾಗ್ಸೆಸ್ ಪುರಸ್ಕಾರ ಸಮಿತಿಯಿಂದ 50 ಸಾವಿರ ಡಾಲರ್ ಬರಲಿದೆ. ಇದನ್ನು ಸಾಮಾಜಿಕ ಕಾರ್ಯಗಳಿಗೆ ವಿಶೇಷವಾಗಿ ಇನ್ನೂ ಅಗ್ಗದ ದರದಲ್ಲಿ ಸೌರದೀಪ ನೀಡುವ ಕುರಿತು ಸಂಶೋಧನೆಗೆ ಬಳಸುವ ಘೋಷಣೆ ಮಾಡಿದ್ದಾರೆ.

ನಮ್ಮವರು ಗುರುತಿಸುವ ಮೊದಲೇ ರೇಮನ್ ಮ್ಯಾಗ್ಸೆಸೆ ಪ್ರತಿಷ್ಠಾನ ಹರೀಶ್ ಹಂದೆಯವರ ಸಾಮಾಜಿಕ ಚಿಂತನೆ, ಕಳಕಳಿಯನ್ನು ಗುರುತಿಸಿದೆ. ಅದಕ್ಕಾಗಿ ಅಭಿನಂದಿಸೋಣ. ಮೇದಿನಿಯ ಗೌಡ, ಲಂಬಾಣಿ ತಾಂಡಾದ ವಾಲ್ಮೀಕಿಯಂತೆ ನಾವೂ ಸೂರ್ಯನಿಗೆ ಪ್ಲಗ್ ಹಾಕೋಣ ಅಲ್ಲವೇ.



---

## ಪಾಕಿಸ್ತಾನದಲ್ಲಿ ಮದುವೆ ನೋಂದಣಿಗೆ

# ಹಿಂದೂಗಳ ಪರದಾಟ

ಪಾಕಿಸ್ತಾನದಲ್ಲಿ ಮದುವೆ ನೋಂದಣಿ ಆಗದಿದ್ದರೆ ಅಲ್ಲಿನ ಕಂಪ್ಯೂಟರೀಕೃತ ರಾಷ್ಟ್ರೀಯ ಗುರ್ತಿನ ಚೀಟಿ ದೊರೆಯುವುದಿಲ್ಲ. ಆದರೆ, ಮದುವೆ ನೋಂದಣಿಗೆ ಹಿಂದೂಗಳೂ ಸೇರಿದಂತೆ ಅಲ್ಪಸಂಖ್ಯಾತರಿಗೆ ಮಹಮದ್ ಅಲಿ ಜಿನ್ನಾ ದೇಶ 65 ವರ್ಷ ಕಳೆದರೂ ಯಾವುದೇ ವ್ಯವಸ್ಥೆ ಮಾಡಿಲ್ಲ. ಕಂಪ್ಯೂಟರೀಕೃತ ರಾಷ್ಟ್ರೀಯ ಗುರ್ತಿನ ಚೀಟಿ ಇಲ್ಲವಾದರೆ ಯಾವುದೇ ವ್ಯವಹಾರ ನಡೆಸಲು, ಸವಲತ್ತು ಪಡೆದುಕೊಳ್ಳಲು ಅವಕಾಶ ಇಲ್ಲ.

1947, ಆಗಸ್ಟ್ 11ರಂದು ಪ್ರತ್ಯೇಕ ದೇಶವಾಗಿ ಪಾಕಿಸ್ತಾನ ಅಸ್ತಿತ್ವಕ್ಕೆ ಬಂದ ದಿವಸ ಹೊಸ ರಾಷ್ಟ್ರದ ಪಿತೃ ಮೊಹಮದ್ ಅಲಿ ಜಿನ್ನಾ ಸಾರಿದರು- "...ನೀವು ಇಲ್ಲಿ ಸಂಪೂರ್ಣ ಸ್ವತಂತ್ರರು. ನಿಮ್ಮ ನಿಮ್ಮ ದೇವಾಲಯಗಳಿಗೆ ಮುಕ್ತವಾಗಿ ಹೋಗಿ ಬರಬಹುದು. ನೀವು ಯಾವುದೇ ಧರ್ಮ ಇಲ್ಲವೇ ಜಾತಿ ಅಥವಾ ಮತಕ್ಕೆ ಸೇರಿದ್ದರೂ ಸರಿ, ಸರ್ಕಾರದ ಆಡಳಿತಕ್ಕೂ ಅದಕ್ಕೂ ಯಾವ ರೀತಿಯಲ್ಲೂ ಸಂಬಂಧ ಇರುವುದಿಲ್ಲ" ಎಂದು.

ಹಿಂದೂಗಳು ಸೇರಿದಂತೆ ಅಲ್ಪಸಂಖ್ಯಾತರ ಹಿತರಕ್ಷಣೆಗಾಗಿ ತಮ್ಮ ರಾಷ್ಟ್ರೋದಯದ ಮೊದಲ ಭಾಷಣದಲ್ಲಿ ಜಿನ್ನಾ ಈ ಮಾತುಗಳನ್ನು ಆಡಿದ್ದು ಬಿಟ್ಟರೆ ಬೇರಾವ ಭದ್ರತೆಯೂ ಕಂಡುಬಂದಿಲ್ಲ. ವರ್ಷಗಳು ಉರುಳಿದಂತೆ ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾತರ ಭವಿಷ್ಯ ಮಸಕು ಮಸಕಾಗುತ್ತಾ ಬಂದಿದೆ; ಬರುತ್ತಿದೆ.

ಅಲ್ಪಸಂಖ್ಯಾತರು ಎದುರಿಸುತ್ತಿರುವ ಹಿತರಕ್ಷಣೆಯ ಸಮಸ್ಯೆಗೆ ಪರಿಹಾರ ಖಂಡಿತವಾಗಿಯೂ ಸಿಕ್ಕಿಲ್ಲ. ಪ್ರಯತ್ನಗಳು ನಡೆದಿಲ್ಲವೆಂದಲ್ಲ. ಆದರೆ ಅವುಗಳನ್ನು ಮಾನ್ಯ ಮಾಡಿ ಈಡೇರಿಸುವವರು ಇಲ್ಲ ಎನ್ನುತ್ತಿದೆ ವರದಿಯೊಂದು.

ಹಿತರಕ್ಷಣೆಯ ಅಭಾವದಿಂದಲೋ, ಭೀತಿಯಿಂದಲೋ,ಭವಿಷ್ಯದಆಕಾಂಕ್ಷೆಯಿಂದಲೋ ಅನೇಕ ಅಲ್ಪಸಂಖ್ಯಾತ ಸಮುದಾಯಗಳವರು ನೆರೆ-ಹೊರೆ ದೇಶಗಳಿಗೆ ವಲಸೆ ಹೋಗಿದ್ದಾರೆ. ಹಾಗೆಂದ ಮಾತ್ರಕ್ಕೆ ಅಲ್ಪಸಂಖ್ಯಾತರ ಸಂಖ್ಯೆ ಪಾಕಿಸ್ತಾನದಲ್ಲಿ ಸಾಕಷ್ಟು ತಗ್ಗಿದೆಯೆಂದಲ್ಲ. ಈಗಲೂ ಅಗಾಧ ಪ್ರಮಾಣದಲ್ಲಿ ಅಲ್ಪಸಂಖ್ಯಾತರು ಅಲ್ಲುಂಟು. ಆ ಪೈಕಿ ಹಿಂದೂಗಳದ್ದೇ ಹೆಚ್ಚಿನ ಸಂಖ್ಯೆ.

ಅಲ್ಪಸಂಖ್ಯಾತರು ಇದೀಗ ಎದುರಿಸುತ್ತಿರುವ ಪಾಕ್ ಆಡಳಿತದ ಉಪೇಕ್ಷೆ ಫಲ ಗಂಭೀರವಾಗಿದೆ. ದೇಶಾದ್ಯಂತ ಕಂಪ್ಯೂಟರೀಕೃತ ರಾಷ್ಟ್ರೀಯ ಗುರ್ತಿನ ಚೀಟಿಗಳನ್ನು ನೀಡಲಾಗುತ್ತಿದೆ. ಚೀಟಿಗಳನ್ನು ಪಡೆಯಲು ದಂಪತಿಗೆ ಮದುವೆ ನೋಂದಣಿಯ ಪ್ರಮಾಣಪತ್ರ ಬೇಕೇ ಬೇಕು. ಆದರೆ ಪ್ರಮಾಣ ಪತ್ರವನ್ನು ಅಲ್ಪಸಂಖ್ಯಾತ ಸಮುದಾಯದವರಿಗೆ ನೀಡುವ ವ್ಯವಸ್ಥೆಯನ್ನು ಪಾಕಿಸ್ತಾನದ ಆಡಳಿತ ಈತನಕ ಮಾಡಿಲ್ಲ.



ಪಾಕ್ ಸರ್ಕಾರ ತನ್ನ ಉಪೇಕ್ಷೆಯ ಬಗ್ಗೆ ಗಮನ ಹರಿಸದಿದ್ದರೂ, ಅಲ್ಲಿನ ಸುಪ್ರೀಂ ಕೋರ್ಟ್ ಭರವಸೆಯೊಂದನ್ನು ಮೂಡಿಸಿದೆ. ಹಿಂದೂ ಮಹಿಳೆಯೊಬ್ಬಳಿಗೆ ಕಂಪ್ಯೂಟರೀಕೃತ ರಾಷ್ಟ್ರೀಯ ಗುರುತಿನ ಚೀಟಿಯನ್ನು ನೀಡದ್ದರಿಂದ ಆಕೆಗೆ ಎದುರಾಗಿರುವ ಸಮಸ್ಯೆಗಳನ್ನು ಪರಮೋಚ್ಚ ನ್ಯಾಯಾಲಯ ಪರಿಗಣಿಸಿದೆ. ಸರ್ಕಾರಕ್ಕೆ ನಿರ್ದೇಶನ ಕೊಟ್ಟು ಲೋಪದೋಷವನ್ನು ಸರಿಪಡಿಸುವಂತೆ ತಿಳಿಸಿದೆ. ಆದರೂ, ಹಿಂದೂಗಳೂ ಸೇರಿದಂತೆ ಅಲ್ಪಸಂಖ್ಯಾತರ ಸಮುದಾಯಗಳ ದಂಪತಿಗಳು ಮದುವೆ ನೋಂದಣಿ ಪ್ರಮಾಣ ಪತ್ರ ಪಡೆದುಕೊಳ್ಳಲು ಸುಗಮವಾದ ವ್ಯವಸ್ಥೆಯನ್ನು ಸರ್ಕಾರ ಇನ್ನೂ ಮಾಡಿಲ್ಲ. ಕಂಪ್ಯೂಟರೀಕೃತ ರಾಷ್ಟ್ರೀಯ ಗುರುತಿನ ಚೀಟಿ ಪಡೆದುಕೊಳ್ಳಲು ಈ ಸಮುದಾಯಗಳಿಗೆ ಸಾಧ್ಯವಾಗುತ್ತಿಲ್ಲ.

ಯಾವುದೇ ಅಧಿಕೃತ ಕೆಲಸ, ವಹಿವಾಟು ನಡೆಸಬೇಕಾದರೂ ರಾಷ್ಟ್ರೀಯ ಗುರುತಿನ ಚೀಟಿ ಬೇಕೇ ಬೇಕು. ಗುರುತಿನ ಚೀಟಿ ಇಲ್ಲವಾದರೆ ಪಾಕಿಸ್ತಾನದಲ್ಲಿ ಅಸ್ತಿತ್ವವೇ ಇಲ್ಲದಂತಾಗುತ್ತದೆ. ಮತದಾನದ ಹಕ್ಕು ಇರುವುದಿಲ್ಲ. ಹೋಟೆಲಿನಲ್ಲಿ ದಂಪತಿ ಕೊಠಡಿಯನ್ನು ಬಾಡಿಗೆಗೆ ಪಡೆಯಲು ಸಹ ಗುರ್ತಿನ ಚೀಟಿ ಅಗತ್ಯವಾಗುತ್ತದೆ. ಗುರ್ತಿನ ಚೀಟಿ ಇಲ್ಲದಿದ್ದರೆ ದಂಪತಿ ಸಂಬಂಧವನ್ನೇ ಹೊಟೇಲ್ ಮಂದಿ ಅಪಾರ್ಥ ಮಾಡುತ್ತಾರೆ.

ಮದುವೆ ನೋಂದಣಿ ಪ್ರಮಾಣಪತ್ರ ಇಲ್ಲದ್ದು ಪತ್ನಿಯರನ್ನು ಏಕಾಏಕಿ ಬಿಟ್ಟುಬಿಡುವ ಗಂಡಂದಿರ ಸಂಖ್ಯೆಯೂ ಪಾಕಿಸ್ತಾನದ ಅಲ್ಪಸಂಖ್ಯಾತರ ಸಮುದಾಯಗಳಲ್ಲಿ, ಹಿಂದೂಗಳಲ್ಲಿ ಬಹು ಪ್ರಮಾಣದಲ್ಲಿವೆ. ನ್ಯಾಯ ಹೋರಾಟದಲ್ಲಿ ಮಹಿಳೆಗೆ ಆಧಾರವೇ ಇಲ್ಲದ ದೀನ ಪರಿಸ್ಥಿತಿ ಇದು. ಗಂಡನಿಂದ ಹಿಂಸೆಗೆ ಒಳಗಾದ ಮಹಿಳೆ ಪ್ರಮಾಣ ಪತ್ರ ಇಲ್ಲದಿದ್ದರೆ ಪೊಲೀಸ್ ದೂರು ಕೊಡಲೂ ಸಹ ಸಾಧ್ಯವಿಲ್ಲ.ಮುಸ್ಲಿಂಸಮುದಾಯದವರಿಗೆಸರ್ಕಾರೀ ಇಲಾಖೆಯಿಂದ ಮದುವೆ ಪ್ರಮಾಣಪತ್ರವೇ ಆಗಬೇಕೆಂದೇನೂ ಇಲ್ಲ. ಖಾಜೀ ಮಾಡಿಸುವ ಮದುವೆಯ 'ನಿಖಾನಾಮಾ' ಇದ್ದರೆ ಸಾಕು. ಅದೇ ಅವರಿಗೆ ಮದುವೆ ಪ್ರಮಾಣಪತ್ರ. ಕ್ರಿಶ್ಚಿಯನ್ನರಿಗೂ ಅಷ್ಟೇ. ಇಗರ್ಜಿಗಳು ಕೊಡುವ ಪ್ರಮಾಣಪತ್ರ ಅವರ ಮದುವೆಯನ್ನು ದೃಢೀಕರಿಸುತ್ತದೆ.

ಇತರೆ ಸಮುದಾಯದವರಿಗೆ ಇಂತಹ ಸುಭದ್ರವಾದ ಧಾರ್ಮಿಕ ಬೆಂಬಲ ಇಲ್ಲ. ಹಿಂದೂಗಳ ಪಾಲಿಗಂತೂ ಈ ಅನಾಥ ಸ್ಥಿತಿ ಘೋರ. ಸಿಖ್ ಸಮುದಾಯದವರಲ್ಲೂ ಇದೇ ಸ್ಥಿತಿ ಇತ್ತಾದರೂ ಇತ್ತೀಚೆಗೆ ಅವರು ಪ್ರದರ್ಶಿಸಿದ ಒಗ್ಗಟ್ಟಿನ ಫಲವಾಗಿ ಪರಿಹಾರ ಸಿಕ್ಕಿದೆ. ಗುರುದ್ವಾರಗಳಲ್ಲಿ ಕೊಡುವ 'ಆನಂದ್ ಕರಾಜ್ (ಮದುವೆ ಪ್ರಮಾಣಪತ್ರ)' ಅನ್ನು ಕಂಪ್ಯೂಟರೀಕೃತ ರಾಷ್ಟ್ರೀಯ ಗುರುತಿನ ಚೀಟಿ ಪಡೆದುಕೊಳ್ಳುವ ದಾಖಲೆಗೆ ಪರಿಗಣಿಸಲು ಪಾಕಿಸ್ತಾನ ಸರ್ಕಾರ ಆದೇಶ ಹೊರಡಿಸಿದೆ.

ಹಿಂದೂಗಳಲ್ಲೂ ಇಂತಹ ಪ್ರಯತ್ನಗಳು ನಡೆದಿಲ್ಲವೆಂದಲ್ಲ. ಅಲ್ಪಸಂಖ್ಯಾತ ಹಕ್ಕುಗಳ ಚಳವಳಿ ಸಂಘಟನೆ ಅಧ್ಯಕ್ಷ ರಮೇಶ್ ಜೈಪಾಲ್ ಇಂಥ ಪ್ರಯತ್ನವನ್ನು ನಡೆಸಿದ್ದಾರೆ. ಆದರೂ ಫಲ ಇನ್ನೂ ಸಿಕ್ಕಿಲ್ಲ. ಹಿಂದೂಗಳ ಬಗ್ಗೆ ಅನಾದರ ತೀವ್ರವಾಗಿರುವುದರ ಫಲಶ್ರುತಿ ಇದು.

ಸಿಂಧ್ ಪ್ರಾಂತ್ಯದ ಉದಾಹರಣೆಯೊಂದು ಇಲ್ಲಿ ನೆನಪಿಗೆ ಬರುತ್ತಿದೆ. ಪ್ರಾಂತ್ಯದ ಜನ ಸಂಖ್ಯೆಯ ಶೇಕಡ 94ರಷ್ಟು ಹಿಂದೂಗಳು. ಭಾರತ ಪಾಕಿಸ್ತಾನ ಇಬ್ಭಾಗವಾದಾಗ ಪ್ರಾಂತ್ಯದಲ್ಲಿ ಹಿಂಸಾಚಾರ ನಡೆದಿರಲಿಲ್ಲ. ಆದರೆ ಬಾಬ್ರಿ ಮಸೀದಿ ಧ್ವಂಸದ ನೆಪದಲ್ಲಿ ಸಿಂಧ್ ಪ್ರಾಂತ್ಯದ ಹಿಂದೂಗಳು ವಿಚಿತ್ರ ಹಿಂಸೆಗೆ ಈಡಾದರು. ಸರ್ಕಾರ ಅಲ್ಪಸಂಖ್ಯಾತರಿಗೆ ಆಗ ಯಾವುದೇ ರಕ್ಷಣೆ ಕೊಡಲಿಲ್ಲ.

ಪ್ರಸ್ತುತ ರಮೇಶ್ ಜೈಪಾಲ್ ಮತ್ತು ಇತರ ಸಂಘಟನೆಗಳು ಮದುವೆ ನೋಂದಣಿ ಪ್ರಮಾಣ ಪತ್ರ ಪಡೆದುಕೊಳ್ಳುವ ಇಲ್ಲವೇ ಪರ್ಯಾಯ ಪ್ರಮಾಣೀಕರಣ ಸಾಧಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನಶೀಲ. ಕರಾಚಿ ವಿಭಾಗದ ಹಿಂದೂ ಪಂಚಾಯಿತಿ ಅಧ್ಯಕ್ಷ ಅಮರನಾಥ್ ಸಹ ಈ ನಿಟ್ಟಿನಲ್ಲಿ ಕೈಜೋಡಿಸಿದ್ದಾರೆ. ಇಸ್ಲಾಮಾಬಾದಿನ ಕೇಂದ್ರ ಸರ್ಕಾರಕ್ಕೆ ಮನವಿಯೊಂದನ್ನು ಸಲ್ಲಿಸಿದ್ದಾರೆ. ವರ್ಷಾಂತ್ಯದ ವೇಳೆಗೆ ಪರಿಹಾರ ದೊರೆಯಬಹುದೆಂಬ ವಿಶ್ವಾಸ ರಮೇಶ್ ಮತ್ತು ಅಮರನಾಥ್ ಅವರದ್ದಾಗಿದೆ.

ಈ ಮಧ್ಯೆ, ಹಿಂದೂ ಪಂಚಾಯ್ತಿ ಮೂಲಕ ಮದುವೆ ಪ್ರಮಾಣ ಪತ್ರ ನೀಡುವ ಏರ್ಪಾಟೂ ನಡೆಸಲಾಗಿದೆ. ಅಂತಹ ಪ್ರಮಾಣ ಪತ್ರಗಳನ್ನು ಅಂಗೀಕರಿಸುವುದು ಸರ್ಕಾರಿ ಇಲಾಖೆಯ ಇಚ್ಛೆಗೆ ಒಳಪಡುತ್ತದೆ. ಅಧಿಕಾರಿಗಳು ಒಪ್ಪಿದರೆ ಸರಿ. ಇಲ್ಲವಾದರೆ ಹಿಂದೂಗಳಿಗೆ ಅದೇ ಬವಣೆ.